ಆ) ರೈತರ ಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೭೦ರಷ್ಟಕ್ಕಿಂತ ಹೆಚ್ಚಾಗಿರುವುದರಿಂದ ಮತ್ತು ಅವರ ಸಮಸ್ಯೆ ಮತ್ತು ಅವಶ್ಯಕತೆಗಳು ಬಹುವಿಧವಾಗಿರುವುದರಿಂದ ಈ ತರಹದ ಒಂದು ನಿಗಮ ಇವುಗಳನ್ನು ನಿವಾರಿಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಮತ್ತು ನಿಗಮಗಳು ರೈತರ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣಕ್ಕೋಸ್ಕರ ತಮ್ಮ ಸಿಬ್ಬಂದಿ ಮತ್ತು ಸಾಮಗ್ರಿಗಳ ನೆರವಿನಿಂದ ಕೆಲಸ ಮಾಡುತ್ತಿವೆ. ಈ ಕಾರಣದಿಂದ ಈ ತರಹದ ನಿಗಮವನ್ನು ಸ್ಥಾಪಿಸುವುದು ಅನಾವಶ್ಯಕ.

## ಹುಮ್ನಾಬಾದ್ ಹೆಣ್ಣು ಮಕ್ಕಳ ಪ್ರೌಢಶಾಲೆಯ ಕಟ್ಟಡದ ಬಗ್ಗೆ.

*೨೧೫. ಶ್ರೀ ಬಸವರಾಜ ಪಾಟೀಲ (ಹುಮ್ನಾಬಾದ್).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ೬ ವರ್ಷಗಳ ಹಿಂದೆ ಹುಮ್ನಾಬಾದ್ ಹೆಣ್ಣು ಮಕ್ಕಳ ಪ್ರೌಢಶಾಲೆಯ ಕಟ್ಟಡಕ್ಕೆ ಅಡಿಗಲ್ಲು ಇಟ್ಟದ್ದು ಸರಕಾರಕ್ಕೆ ಗೊತ್ತಿದೆಯೇ

ಆ) ಹಾಗಿದ್ದಲ್ಲಿ ಕಟ್ಟಡ ಎಂದು ಪ್ರಾರಂಭಿಸಲಾಗುವುದು, ಹಾಗೂ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು).—

ಅ) ೧೯೭೭ರಲ್ಲಿ ಮಾಜಿ ಕಂದಾಯ ಮಂತ್ರಿಗಳಾದ ಶ್ರೀ ಎಮ್. ಎಮ್. ಖಾರ್ಗೆ ಅವರ ಸಮಕ್ಷಮ ಅಡಿಗಲ್ಲು ಇಡಲಾಗಿದೆ. ಹುಮನಾಬಾದ್ ಸರಕಾರಿ ಬಾಲಕಿಯರ ಪ್ರೌಢಶಾಲೆಯು ಸದ್ಯಕ್ಕೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಭೂವಿವಾದ ಉಂಟಾಗಿ ಸ್ವಂತ ಕಟ್ಟಡ ಕಟ್ಟುವ ಕೆಲಸಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದರಿಂದ ಅಡ್ಡಿಯುಂಟಾಗಿದೆ. ಇದಕ್ಕೆ ಬೇರೆ ನಿವೇಶನ ಈವರೆಗೆ ವಶಕ್ಕೆ ಬಂದಿರುವುದಿಲ್ಲ.

ಆ) ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವು ಮಾಡುವವರೆಗೆ ಈ ಬಗ್ಗೆ ಏನೂ ಮಾಡಲಿಕ್ಕೂ ಆಗುವುದಿಲ್ಲ.

## ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ

೨೨೧ ಶ್ರೀ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ೧೧೮

ಆ) ೯೩

ಇ) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡಲು ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು.